**ಭದ್ರಾವತಿಯ ಗೌರವಾನ್ವಿತ 4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿರವರ**

**ನ್ಯಾಯಾಲಯದಲ್ಲಿ**

**ಸಿ.ಸಿ.ನಂ.2569/2025**

ಪಿರ್ಯಾದುದಾರರು : ಶ್ರೀ ನಾಗರಾಜ್.ಜಿ.,
ಬಿನ್ ಲೇಟ್ ಜುಂಜಯ್ಯ, 64 ವರ್ಷ,
ನಿವೃತ್ತ ಕೆ.ಇ.ಬಿ. ನೌಕರ,
ಅಶ್ವತ್ ನಗರ, 3 ನೇ ಕ್ರಾಸ್,
ಸರ್ಕಾರಿ ಆಸ್ಪತ್ರೆ ಹಿಂಭಾಗ, ಭದ್ರಾವತಿ.

ವಿರುದ್ಧ

ಆರೋಪಿ : ಶ್ರೀಮತಿ ಯಶೋಧ,
ಕೋಂ ಮೋಹನಕುಮಾರ್.ಬಿ.,
35 ವರ್ಷ, ವಾಸಃ 3 ನೇ ತಿರುವು,
ಸುಭಾಷ್ ನಗರ, ಅಕ್ಕಮಹಾದೇವಿ ಶಾಲೆ ರಸ್ತೆ,
ಹೊಸಮನೆ, ಭದ್ರಾವತಿ .

**ಆಪಾದನೆ**

ಆರೋಪಿಯಾದ ನೀವು ಪಿರ್ಯಾದುದಾರರಿಂದ ಗೃಹಕೃತ್ಯ ಹಾಗೂ ಹಣಕಾಸಿನ ಅಗತ್ಯತೆಗಾಗಿ ದಿನಾಂಕ 26.07.2024 ರಂದು ರೂ.10,00,000-00 ಗಳ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲದ ಹಣದ ಮರು ಪಾವತಿಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೊಳೆಹೊನ್ನೂರು ರಸ್ತೆ ಶಾಖೆ, ಭದ್ರಾವತಿ, ಚೆಕ್ ಸಂಖ್ಯೆ 724337, ದಿನಾಂಕ 22.01.2025, ರೂ.10,00,000/- ಎಂದು ನಮೂದಿಸಿದ ಚೆಕ್ ನೀಡಿದ್ದು, ದಿನಾಂಕ 23.01.2025 ರಂದು ಪಿರ್ಯಾದಿಯು ಸದರಿ ಚೆಕ್ಕನ್ನು ತನ್ನ ಹಣಕಾಸಿನ ವ್ಯವಹಾರದ ಖಾತೆ ಇರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಜನ್ನಾಪುರ ಶಾಖೆ,

ಭದ್ರಾವತಿ ಇಲ್ಲಿಗೆ ನಗದೀಕರಣಕ್ಕಾಗಿ ಸಲ್ಲಿಸಿದ್ದು, ಸದರಿ ಚೆಕ್ಕು ದಿನಾಂಕ 24.01.2025 ರಂದು "**Funds Insufficient**" ಎಂಬ ಷರಾದೊಂದಿಗೆ ವಾಪಾಸ್ಸಾಗಿದ್ದು, ನಂತರ ಈ ವಿಷಯವನ್ನು ಆರೋಪಿಯಾದ ನಿಮಗೆ ತಿಳಿಸಿದರೂ ಸಹ ನೀವು ಯಾವುದೇ ಹಣವನ್ನು ವಾಪಾಸ್ಸು ನೀಡದೇ ಇದ್ದು, ಫಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಚೆಕ್ಕನ್ನು ನೀಡಿರುತ್ತೀರಿ. ಆದ್ದರಿಂದ ನೀವು ಕಲಂ 138 ವರ್ಗಾವಣೀಯ ಲಿಖಿತ ಕಾಯ್ದೆಯಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ಆರೋಪಿಸಲಾಗಿರುತ್ತದೆ.

ಪ್ರಶ್ನೆ 1. ಈಗ ಓದಿ ಹೇಳಿದ ಆಪಾದನೆ ಅರ್ಥವಾಯಿತೇ?
ಉತ್ತರಃ

ಪ್ರಶ್ನೆ 2. ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

ದಿನಾಂಕ 21.04.2026
ಭದ್ರಾವತಿ.

4 **ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಭದ್ರಾವತಿ.**

ಆರೋಪಿ ಸಹಿಃ